**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.462/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸತ್ಯನಾರಾಯಣ್ | ಫ್ರಾಸಾ -4 |
| ತಂದೆಯ ಹೆಸರು | : ನಾಗರಾಜ್ ರಾವ್ | ಚಾಸಾ-5 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಟೈಲರ್ | ದಿನಾಂಕಃ20.03.2025 |
| ವಾಸಸ್ಥಳ | : ಬಾಣಾವರ, ಹಾಸನ. | |

<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗಲಾಟೆ ಸಮಯಕ್ಕೆ ನೋಡಿದ್ದೇನೆ.

ದಿ.02.11.2024 ರಂದು ನಾನು ಉಜಿರೆಯಿಂದ ಚಿಕ್ಕಮಗಳೂರಿಗೆ KSRTC ಬಸ್ ನಲ್ಲಿ ಬರುತ್ತಿದ್ದೆ. ಆ ದಿನ ಬೆಳಗ್ಗೆ ಸುಮಾರು 10.45 ರ ಸಮಯಕ್ಕೆ ಚಾರ್ಮುಡಿ ಘಾಟಿಯಲ್ಲಿ ಬರುತ್ತಿರುವಾಗ ಆರೋಪಿಯು ಸ್ಕೂಟಿ ವಾಹನದಲ್ಲಿ ನಾವು ಇದ್ದ ಬಸ್ ನ್ನು ಓವರ್ ಟೇಕ್ ಮಾಡಿಕೊಂಡು ಬಂದು ನಾವು ಇದ್ದ ಬಸ್ ನ ಡ್ರೈವರ್ ಮತ್ತು ಕಂಡಕ್ಟರ್ ಗೆ ಎಲ್ಮೆಟ್ ನಿಂದ ಹೊಡೆದು ಕೆಟ್ಟ ಕೆಟ್ಟ ಶಬ್ದಗಳಿಂದ ಬೈದು ತನ್ನ ಪ್ಯಾಂಟನ್ ಬಿಚ್ಚಿ ಅಸಭ್ಯ ವರ್ತನೆ ಮಾಡಿ ಸ್ಥಳದಿಂದ ಹೋದರು. ನಂತರ ನಮ್ಮ ಬಸ್ ನ ಡ್ರೈವರ್ ಮತ್ತು ಕಂಡಕ್ಟರ್ ರವರು ಬಣಕಲ್ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>

ನಾನು ದಿ.02.11.2023 ರಂದು ಮೇಲೆ ಹೇಳಿದಂತೆ KA-19-F-3360 KSRTC ಬಸ್ ನಲ್ಲಿ ಹೋಗುತ್ತಿದ್ದೆ ಎಂದರೆ ಸರಿ. ಚಾಸಾ-1 ರವರು ಸದರಿ ಬಸ್ ನ ಕಂಡಕ್ಟರ್ ಹಾಗೂ ಚಾಸಾ-2 ರವರು ಸದರಿ ಬಸ್ ನ ಚಾಲಕರಾಗಿದ್ದರು ಎಂದರೆ ಸರಿ. ಆರೋಪಿಯು KA-18-EK-1536 ನೊಂದಣಿ ಸಂಖ್ಯೆಯ ಸ್ಕೂಟಿಯಲ್ಲಿ ಬಂದಿದ್ದರು ಎಂದರೆ ಸರಿ. ಆರೋಪಿಯು ಚಾಸಾ-1 ಮತ್ತು 2 ರವರಿಗೆ ತನ್ನ ಕೈಯಿಂದಲೂ ಹಲ್ಲೆ ಮಾಡಿ ಚಾಸಾ-1 ರವರ ಸಮವಸ್ತ್ರವನ್ನು ಹಿಡಿದು ಎಳೆದಾಡಿರುತ್ತಾರೆ ಎಂದರೆ ಸರಿ. ಎಂ.ಓ.2 ರಲ್ಲಿಯೇ ಆರೋಪಿಯು ಹೊಡೆದಿರುವುದು ಎಂದರೆ ಸಾಕ್ಷಿಯು ನಾನು ಅಷ್ಟು ಅಬ್ಸರ್ವ್ ಮಾಡಿಲ್ಲ ಆದರೆ ಆರೋಪಿಯೊಂದಿಗೆ ಒಬ್ಬ ಮಹಿಳೆ ಇದ್ದರು ಎಂದು ನುಡಿಯುತ್ತಾರೆ.

<u>ಪಾಟೀ ಸವಾಲು: ಆರೋಪಿ ಪರಃಶ್ರೀ ಹೆಚ್.ಎಸ್.ಆರ್. ವಕೀಲರಿಂದಃ</u>

ದಿ.02.11.2023 ರಂದು ನಾನು ಧರ್ಮಸ್ಥಳಕ್ಕೆ ಹೋಗಿ ಅಲ್ಲಿಂದ ಉಜಿರೆ ಮಾರ್ಗವಾಗಿ ಚಿಕ್ಕಮಗಳೂರಿಗೆ ಬರುತ್ತಿದ್ದೆ. ಆ ದಿನ ಧರ್ಮಸ್ಥಳದಿಂದ ಹೊರಟಾಗ ಬೆ.9.00 ಆಗಿರಬಹುದು. ಉಜಿರೆಯಿಂದ ಧರ್ಮಸ್ಥಳಕ್ಕೆ ಸುಮಾರು 8-10 ಕಿ.ಮೀ ಇರಬಹುದು. ನಾನು ಬಸ್ ನಲ್ಲಿಯೇ ಧರ್ಮಸ್ಥಳದಿಂದ ಉಜಿರೆಗೆ ಬಂದಿದೆ. ಉಜಿರೆಗೆ ಬರಲು 10-15 ನಿಮಿಷ ಆಗುತ್ತದೆ ಎಂದರೆ

ಇರಬಹುದು. ಉಜಿರೆಯಲ್ಲಿ ಅರ್ಧ ಗಂಟೆಯವರೆಗೂ ಬಸ್ ಗೆ ಕಾದಿದ್ದೆ. ಧರ್ಮಸ್ಥಳ ಮತ್ತು ಉಡುಪಿ-ಮಂಗಳೂರಿನಿಂದ ಚಿಕ್ಕಮಗಳೂರು ಮಾರ್ಗವಾಗಿ 5-10 ನಿಮಿಷಕ್ಕೆ ಒಂದು ಬಸ್ ಇದೆ ಎಂದರೆ ಸರಿಯಲ್ಲ. ನಾನು ಕಾಯ್ದಿದ್ದ ಅರ್ಧ ಗಂಟೆ ಸಮಯಕ್ಕೆ ಮೇಲೆ ಹೇಳಿದ ಒಂದೇ ಬಸ್ ಬಂದಿದ್ದು. ಉಜಿರೆಯಿಂದ ಹೊರಟಾಗ ಬೆ.10.00 ಗಂಟೆಯಾಗಿತ್ತು. ಆ ಬಸ್ ನಲ್ಲಿ ಸುಮಾರು 30-35 ಜನ ಪ್ರಯಾಣಿಕರು ಇರಬಹುದು. ಮೂರು ಸೀಟುಗಳು ಉಳ್ಳ ಸೀಟಿನ ಮಧ್ಯದಲ್ಲಿ ಕೂತಿದ್ದೆ. ಆ ದಿನ ಚಾಸಾ-1 ರವರು ನಿರ್ವಾಹಕರ ಸೀಟಿನಲ್ಲಿ ಕೂತಿದ್ದರು ಎಂದರೆ ಸರಿ.

ಮಧ್ಯದ ಸೀಟಿನಲ್ಲಿ ಕುಳಿತರೆ ಬಸ್ಸಿನ ಮುಂಬದಿ ಹಾಗೂ ಹಿಂಬದಿ ಆಗುವ ಚಟುವಟಿಕೆಗಳು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿಯು ನಾನು ಬಸ್ಸಿನ ಮಧ್ಯಭಾಗದ ಸೀಟಿನ ಕಿಟಕಿ ಪಕ್ಕ ಕೂತಿದ್ದೆ ಎಂದು ನುಡಿಯುತ್ತಾರೆ. ಬಸ್ಸಿನ ಬಲಭಾಗಕ್ಕೆ ನಾನು ಕೂತಿದ್ದೆ. ಸ್ಕೂಟಿಯ ಚಾಲಕ ನಮ್ಮ ಬಸ್ಸಿನ ಎದುರಿನಿಂದ ಬರುವುದನ್ನು ನಾನು ನೋಡಿಲ್ಲ. ರಾಷ್ಟ್ರೀಯ ಹೆದ್ದಾರಿ 73 ರಲ್ಲಿ ಅನೇಕ ವಾಹನಗಳು ಓಡಾಡುತ್ತಿವೆ ಎಂದರೆ ಸರಿ. ಕೊಟ್ಟಿಗೆಹಾರದಿಂದ ಚಾರ್ಮುಡಿ ಗ್ರಾಮದ ವರೆಗೂ ರಸ್ತೆ ಕಿರಿದಾಗಿದೆ ಎಂದರೆ ಸರಿ. ಈ ಕಾರಣ ವಾಹನಗಳು ನಿಧಾನಗತಿಯಲ್ಲಿ ಚಾಲನೆಯಾಗುತ್ತಿರುತ್ತವೆ ಎಂದರೆ ಇರಬಹುದು. ಗಲಾಟೆಯಾಯಿತು ಎಂದು ಹೇಳಲಾದ ಸ್ಥಳಕ್ಕೆ ಬಸ್ ಬಂದಾಗ ಬೆಳಗ್ಗೆ ಸುಮಾರು 10.45 ರ ಸಮಯವಾಗಿರಬಹುದು. ಆ ಸ್ಥಳದಿಂದ ಉಜಿರೆಗೆ ಎಷ್ಟು ಕಿ.ಮೀ ಅಂತರ ಹಾಗೂ ಬಣಕಲ್ ಗೆ ಎಷ್ಟು ಕಿ.ಮೀ ಎಂದು ನನಗೆ ಹೇಳಲು ಆಗುವುದಿಲ್ಲ. ಘಟನಾ ಸ್ಥಳ ಯಾವ ಗ್ರಾಮ ಮತ್ತು ಯಾವ ಜಿಲ್ಲೆಗೆ ಸಂಬಂಧಿಸಿದ್ದು ಎಂದು ನನ್ನಿಂದ ಹೇಳಲು ಆಗುವುದಿಲ್ಲ.

ಸುಮಾರು 10-15 ನಿಮಿಷಗಳ ವರೆಗೂ ಗಲಾಟೆಯಾಗಿರಬಹುದು. ನಾನು ಜಗಳ ಬಿಡಿಸಲು ಹೋಗಿಲ್ಲ. ಸ್ಕೂಟಿ ಚಾಲಕನ ಹೆಸರು ಮತ್ತು ಆತನೊಂದಿಗೆ ಇದ್ದರು ಎಂದು ಹೇಳಲಾದ ಮಹಿಳೆಯ ಹೆಸರನ್ನು ನಾನು ತಿಳಿದುಕೊಂಡಿಲ್ಲ. ಆರೋಪಿಯು ಯಾರು ಯಾರಿಗೆ ಎಷ್ಟು ಪೆಟ್ಟು ಹೊಡೆದಿದ್ದಾರೆ ಎಂದು ಈಗ ಹೇಳಲು ಆಗುವುದಿಲ್ಲ. ಗಲಾಟೆಯನ್ನು 2 ಮೀಟರ್ ದೂರದಿಂದ ನೋಡಿದ್ದೇನೆ. ಗಲಾಟೆ ಸಮಯಕ್ಕೆ ಇದ್ದ ಜನರ ಹೆಸರನ್ನು ಹೇಳಲು ಆಗುವುದಿಲ್ಲ. ಗಲಾಟೆ ಮುಗಿದ ತಕ್ಷಣ ನಮ್ಮ ಬಸ್ ಮುಂದೆ ಸಾಗಿತು. ನಾವು ಬಣಕಲ್ ಪೋಲಿಸ್ ಠಾಣೆ ಬಳಿ ಬಂದಾಗ ಬೆ.11.30 ರ ಸಮಯವಾಗಿತ್ತು. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿಕೊಂಡಿದ್ದೇನೆ. ಎಲ್ಮೆಟ್ ನಿಂದ ಎಷ್ಟು ಪೆಟ್ಟು ಹೊಡೆದಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಎಂ.ಒ.2 ರಿಂದ ಹೊಡೆದರೆ ರಕ್ತಗಾಯಗಳಾಗುತ್ತವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಯು ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಹೇಳಿದ ದಿನಾಂಕದಂದು KA-19-F-3360 KSRTC ಬಸ್ ನಲ್ಲಿ ಪ್ರಯಾಣ ಮಾಡಿಲ್ಲ ಎಂದರೆ ಸರಿಯಲ್ಲ. ಆ ಬಸ್ ನ್ನು ಆರೋಪಿಯ ಹಿಂಬಾಲಿಸಿಕೊಂಡು ಬಂದು ಚಾಸಾ-1 ಮತ್ತು 2 ರವರಿಗೆ ಬೈದು ಹಲ್ಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಯು ಚಸಾ-1 ರವರ

ಸಮವಸ್ತ್ರವನ್ನು ಹಿಡಿದು ಹರಿದುಹಾಕಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪೋಲಿಸ್ ಠಾಣೆಗೆ ಹೊಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಸಂಬಂಧ ಒಂದು ಬಾರಿ ಮಾತ್ರ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಪೋಲಿಸರಿಗೆ ಆದ ವಿಚಾರವನ್ನು ನಾನು ಹೇಳಿದ್ದು ಅವರು ಸಾಕ್ಷಿಗೆಂದು ನನ್ನ ಸಹಿ ಪಡೆದಿದ್ದಾರೆ. ಯಾವ ಪೋಲಿಸರ ಮುಂದೆ ನಾನು ಹೇಳಿಕೆ ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನ ಹೇಳಿಕೆಯನ್ನು ಬರೆದುಕೊಂಡರ ಎಂದು ನಾನು ಗಮನಿಸಿಲ್ಲ. ನಾನು ಹೇಳಿದಂತೆ ಪೋಲಿಸ್ ಠಾಣೆಗೆ ಹೋಗಿಲ್ಲ ಹಾಗೂ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.